**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಬನಹಟ್ಟಿ.</u>**
**<u>ಸಿ.ಸಿ.ನಂಃ 1230/2025</u>**

ಪಿರ್ಯಾರ್ದುದಾರಃ 1. ಕರ್ನಾಟಕ ಸರ್ಕಾರದ ಪರ ತೇರದಾಳ ಪೊಲೀಸ್

**ವಿರುದ್ಧ**

ಆರೋಪಿತ 1. ಭೀಮಶಿ ತಂಃ ಗಣಪತಿ ಸರಿಕರ,
ವಯಾ: 44 ವರ್ಷ, ಉ: ಕೂಲಿ,
ಸಾ: ತೇರದಾಳ, ತಾ:ರಬಕವಿ-ಬನಹಟ್ಟಿ,

**<u>ಆಪಾದನೆ</u>**

**ನಾನು ಸೌಮ್ಯಾ ಹೂಲಿ,** (ಬಿ.ಎ..ಎಲ್.ಎಲ್.ಬಿ.)

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಬನಹಟ್ಟಿ**

ಆರೋಪಿಯಾದ ನೀವು, 01. ಭೀಮಶಿ ತಂಃ ಗಣಪತಿ ಸರಿಕರ,,

**ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ,**

ದಿನಾಂಕಃ 18-06-2025 ರಂದು 17-10 ಗಂಟೆ ಸಮಯದಲ್ಲಿ ತೇರದಾಳ ಪೋಲಿಸ ಠಾಣಾ ಸರಹದ್ದು, ಪೈಕಿ ತೇರದಾಳ ತಮದಡ್ಡಿ ನಾಕಾ ಹತ್ತಿರ ಇರುವ ದುರ್ಗಾದೇವಿ ಗುಡಿಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಪಾಯಿದೆಗೊಸ್ಕರ 1 ರೂಪಾಯಿಗೆ 80 ರೂಪಾಯಿ ಕೋಡುವ ಕರಾರಿನ ಮೇಲೆ ಕಲ್ಯಾಣ ಮಟಕಾ ಎಂಬುವ ಓ.ಸಿ ಎಂಬುವ ಜೂಜಾಟವನ್ನು ಬರೆದುಕೊಳ್ಳುತ್ತಿದ್ದಾಗ ಸಿಕ್ಕ ಅಪರಾಧ ಮಾಡಿದ್ದು, ಈ ಮೂಲಕ 78(3) ಪೊಲೀಸ್ ಕಾಯ್ದೆ ಅಡಿಯಲ್ಲಿ ದಂಡನಿಯವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುವಿರಿ.

ಸದರಿ ಆಪಾದನೆಗಳ ಬಗ್ಗೆ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಸದರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ 08-02-2026. ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.**

ಪ್ರಶ್ನೆ-1:- ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?
ಉತ್ತರಃ ಅರ್ಥವಾಯಿತು

ಪ್ರಶ್ನೆ-2:- ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ ವಿಚಾರಣೆಯಾಗಬೇಕೋ?
ಉತ್ತರಃ ಒಪ್ಪಿಕೊಳ್ಳುತ್ತೇನೆ.

**ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.**

Sd/-
(ಸೌಮ್ಯಾ ಹೂಲಿ)
ಸಿವಿಲ್ ಜಡ್ಜ್ & ಜೆ.ಎಮ್.ಎಫ್.ಸಿ.,
ಬನಹಟ್ಟಿ

ಸ್ಥಳ: ಬನಹಟ್ಟಿ
ದಿಃ 18-02-2026.

**ಆರೋಪಿತನ ಸಹಿ:-**